# ಓದುಗರ ವೇದಿಕೆ

## ಆದರ್ಶ ಕುಟುಂಬ

**ಈ**ಗ ಕುಟುಂಬ ಎಂದರೆ, ಕಣ್ಮುಂದೆ ನಿಲ್ಲುವುದು ಗಂಡ-ಹೆಂಡತಿ, ಅವರಿಗಿರುವ ಒಂದೆರಡು ಮಕ್ಕಳು ಮಾತ್ರ. ಈ ಮಟ್ಟಕ್ಕೆ ಕುಟುಂಬ ವ್ಯವಸ್ಥೆ ಬಂದು ನಿಂತಿದೆ. ನಗರಗಳಲ್ಲಂತೂ ಈ ಬಗೆಯ ಕುಟುಂಬ ವ್ಯವಸ್ಥೆ ಬಿಟ್ಟು ಬೇರೆ ತೆರನಾದ ಕುಟುಂಬ ವ್ಯವಸ್ಥೆಯನ್ನು ಕಲ್ಪಿಸಿಕೊಳ್ಳಲು ಸಾಧ್ಯವಾಗುವುದೇ ಇಲ್ಲ.

ಈ ಹಿಂದೆ ಕುಟುಂಬವೆಂದರೆ, ತಂದೆ-ತಾಯಿ ಜೊತೆ ಜೊತೆಗೆ ತಾತ, ಅಜ್ಜಿ, ಸೋದರ, ಸೋದರಿಯರು, ಅವರಿಗೆ ಸಂಬಂಧಪಟ್ಟವರೆಲ್ಲ ಇದ್ದು, ಒಂದು ಬಗೆಯ ತುಂಬು ಕುಟುಂಬದಂತಿತ್ತು. ಹೀಗಿರುವುದೇ ಒಂದು ಆದರ್ಶ ಕೂಡ ಆಗಿತ್ತು. ಆದರೆ ಇಂದಿನ ಧಾವಂತದಲ್ಲಿ ಎಲ್ಲವೂ ಬದಲಾಗಿದೆ. ನಮ್ಮ ನಿರೀಕ್ಷೆಗೂ ಮೀರಿ ಕುಟುಂಬ ವ್ಯವಸ್ಥೆ ಸೀಮಿತಗೊಂಡಿದೆ/ಗೊಳ್ಳುತ್ತಿದೆ. ಈ ಬಗೆಯನ್ನೇ ನಾವು ಇಂದು 'ಆದರ್ಶ' ಎಂದು ಒಪ್ಪಿಕೊಳ್ಳುವ ಸ್ಥಿತಿಗೂ ಬಂದುಬಿಟ್ಟಿದ್ದೇವೆ.

ಅಂದಿನ ಅವಿಭಕ್ತ ಕುಟುಂಬದಲ್ಲಿ ಒಬ್ಬರ ಕಷ್ಟ-ಸುಖ ಎಲ್ಲರ ಕಷ್ಟ-ಸುಖವಾಗಿ ಒಂದು ಬಗೆಯ ಆದರ್ಶ ನೆಲೆಯೂರಿತ್ತು. ಇಂದು ಸಂಬಂಧಪಟ್ಟವರೇ ದುಃಖದುಮ್ಮಾನಗಳಲ್ಲಿ ಮುಳುಗೇಳುತ್ತಿದ್ದರೂ ನಮ್ಮ ಮನಸ್ಸೇನೂ ಸ್ಪಂದಿಸುವುದಿಲ್ಲ. ಸ್ಪಂದಿಸಿದರೂ, ಕಾಟಾಚಾರದಂತೆ ವರ್ತಿಸುವುದೇ ಹೆಚ್ಚು! ಇದೇ ಇಂದಿನ ಆದರ್ಶವಾಗುತ್ತಿದೆ ಎಂದರೆ ಅಚ್ಚರಿ ಪಡಬೇಕಾದ್ದಿಲ್ಲ. ಇದರಿಂದಾಗಿ ನಮ್ಮಲ್ಲಿನ ಭಾವನಾತ್ಮಕ ಸಂಬಂಧಗಳು ನೆಪ ಮಾತ್ರವಾಗಿ, ಹೇಳಹೆಸರಿಲ್ಲದಂತಾಗುತ್ತಿವೆ ಎಂದರೆ ತಪ್ಪಾಗಲಾರದು.

ಅಂದಿನ ದಿನಗಳಿಗಿಂತ ಇಂದು ಸಂಪಾದನೆ ಹೆಚ್ಚಾಗಿದ್ದರೂ ನಮ್ಮ ಮನಸ್ಸೇಕೋ ತಂದೆ, ತಾಯಿ, ಮಕ್ಕಳು – ಇವರಿಗೆ ಮಾತ್ರ ಸೀಮಿತವಾಗಿ ಕೂಪಮಂಡೂಕವಾಗುತ್ತಿದೆ. ಕುಟುಂಬದಲ್ಲಿ ನೆಲೆಯೂರಬೇಕಾದ 'ಆದರ್ಶ' ಊರ್ಧ್ವಮುಖವಾಗದೆ, ಅಧೋಮುಖವಾಗುತ್ತಿರುವುದು ನಮ್ಮ ಸೀಮಿತ ಬುದ್ಧಿಯಿಂದಾಗಿಯೇ! ನಾವು ದಿನೇ ದಿನೇ ಕೂಪಮಂಡೂಕರಾಗಿಯೇ ಉಳಿಯಲು ಇಚ್ಛಿಸುತ್ತಿರುವುದರಿಂದ, ಅರ್ಥಾತ್ ಇದನ್ನೇ ಆದರ್ಶ ಎಂದು ಕೂಡ ಬಗೆದಿರುವುದರಿಂದ, ಇದನ್ನು ಬಿಟ್ಟು ಯೋಚಿಸಲಾರದಷ್ಟು ಕುಬ್ಜರಾಗಿದ್ದೇವೆ. ಇನ್ನು 'ಆದರ್ಶ' ಎಲ್ಲಿ ಬಂತು?

**–ಶಂಕರೇಗೌಡ ತುಂಬಿಕೆರೆ, ಮಂಡ್ಯ**

**ಆ**ದರ್ಶ ಕುಟುಂಬ ಹೇಗಿರಬೇಕು? ಪರರಿಗೆ ಮಾದರಿಯಾಗಿರುವಂತಹ ಕುಟುಂಬವೇ ಆದರ್ಶ ಕುಟುಂಬ. ಕುಟುಂಬದ ತಾಯ್ತಂದೆಯರಲ್ಲಿ ಸಾಮರಸ್ಯವಿರಬೇಕು. ಗಂಡಹೆಂಡಿರು ಸಣ್ಣಪುಟ್ಟ ವಿರಸಗಳನ್ನು ದೊಡ್ಡ ಸಮಸ್ಯೆಯಾಗಲು ಬಿಡದೆ ಸಹಬಾಳ್ವೆ ನಡೆಸಬೇಕು. ಇದರಿಂದ ಮನೆಯ ಮಕ್ಕಳ ಮನಸ್ಸಿನ ಮೇಲೆ ಮಹತ್ತರವಾದ ಪ್ರಭಾವ ಉಂಟಾಗುವುದು. ಮನೆಯಲ್ಲಿ ವಯಸ್ಸಾದ ಹಿರಿಯರಿದ್ದರೆ, ಅವರನ್ನು ಗೌರವ, ಪ್ರೀತಿಯಿಂದ ನೋಡಿಕೊಂಡರೆ, ಮಕ್ಕಳ ಮನಸ್ಸಿನಲ್ಲಿ ತಾವು ತಮ್ಮ ಹೆತ್ತವರನ್ನು ಮಮತೆಯಿಂದ ನೋಡಿಕೊಳ್ಳಬೇಕೆನ್ನುವ ಪರಿಜ್ಞಾನ ಮೂಡುತ್ತದೆ.

ತಾಯ್ತಂದೆಯರ ನಡವಳಿಕೆ ಮಕ್ಕಳಿಗೆ ಮಾದರಿಯಾಗಬೇಕು. ತಾಯಿಯಾಗಲಿ ತಂದೆಯಾಗಲಿ ಎಂದಿಗೂ ಒಬ್ಬರ ಅನುಪಸ್ಥಿತಿಯಲ್ಲಿ ಇನ್ನೊಬ್ಬರನ್ನು ಮಕ್ಕಳ ಮುಂದೆ ಹಳಿಯಬಾರದು. ಆಗಲೇ ಮಕ್ಕಳಿಗೆ ತಾಯ್ತಂದೆಯರ ಮೇಲೆ ಸಮನಾದ ಪ್ರೀತಿ ಗೌರವಗಳಿರುತ್ತವೆ. ಸಣ್ಣ ವಯಸ್ಸಿನಿಂದಲೇ ಮಕ್ಕಳಿಗೆ ಚಿಕ್ಕಪುಟ್ಟ ಕೆಲಸಗಳನ್ನು ಮಾಡಲು ಬಿಡಬೇಕು. ಇದರಿಂದ ಅವರ ಜೀವನದಲ್ಲಿ ಸ್ವಲ್ಪ ಮಟ್ಟಿನ ಶಿಸ್ತು ಬರುತ್ತದೆ. ಮನೆಯ ಹಿರಿಯರಿಗೆ ಅನಾರೋಗ್ಯವಾದರೆ ಅವರ ಸೇವೆಯನ್ನು ಪ್ರೀತಿಯಿಂದ ಮಾಡಲು ಮಕ್ಕಳಿಗೆ ಹೇಳಿಕೊಡಬೇಕು. ಆದರ್ಶ ಕುಟುಂಬದ ಮತ್ತೊಂದು ಗುಣವೆಂದರೆ ಮಕ್ಕಳಿಗೆ ಒಳ್ಳೆಯ ಹವ್ಯಾಸಗಳ ಬಗ್ಗೆ ಆಸಕ್ತಿ ಮೂಡಿಸುವುದು.

ಮನೆಗೆ ಬಂದ ಅತಿಥಿಗಳನ್ನು ಪ್ರೀತ್ಯಾದರಗಳಿಂದ ನೋಡಿಕೊಂಡರೆ, ಮಕ್ಕಳೂ ಹಾಗೇ ಮಾಡುತ್ತಾರೆ. ಮನೆಯ ಹಿರಿಯರು ಯಾರನ್ನೂ ಹೀನಾಯವಾಗಿ ಕಾಣುವುದಾಗಲಿ, ಮಾತಿನಿಂದ ನೋಯಿಸುವುದಾಗಲಿ ಎಂದಿಗೂ ಮಾಡಬಾರದು. ಮಕ್ಕಳಿಗೆ ವಿದ್ಯಾಭ್ಯಾಸದ ಮಹತ್ವವನ್ನು ಒತ್ತಿ ಹೇಳಬೇಕು. ಪಾಠಶಾಲೆಯ ಗುರುಗಳ ಬಗ್ಗೆ ಗೌರವ, ಅವರೊಡನೆ ನಮ್ರತೆಯಿಂದ ಕೂಡಿದ ನಡವಳಿಕೆ, ಸಹ ವಿದ್ಯಾರ್ಥಿಗಳೊಡನೆ ಸಾಮರಸ್ಯದ ಬಾಳುವಿಕೆ –ಇವೆಲ್ಲವನ್ನೂ ಮಕ್ಕಳಿಗೆ ತಿಳಿಯುವಂತೆ ಹೇಳಬೇಕು. ಬೆಳಗ್ಗೆ ಬೇಗ ಏಳುವ ಅಭ್ಯಾಸವನ್ನು ಮೈಗೂಡಿಸಬೇಕು. ತಾಯ್ತಂದೆಯರು ಮಕ್ಕಳಿಗೆ ಎಂದೂ ಸುಳ್ಳು ಹೇಳಬಾರದು.

ಎಲ್ಲರ ಪ್ರಮುಖ ಆಕರ್ಷಣೆಯಾದ ದೂರದರ್ಶನದ ವಿಭಿನ್ನ ವಾಹಿನಿಗಳ ಮಿತ ವೀಕ್ಷಣೆ, ಮಕ್ಕಳನ್ನು ಅತಿಯಾದ ದೂರದರ್ಶನದ ವೀಕ್ಷಣೆಯಿಂದ ಉಂಟಾಗುವ ದುಷ್ಪರಿಣಾಮದಿಂದ ದೂರವಿರಿಸುತ್ತದೆ. ಇವನ್ನೆಲ್ಲಾ ನಿಯಂತ್ರಣದಲ್ಲಿಟ್ಟುಕೊಂಡಿರುವ ಕುಟುಂಬವೇ ಆದರ್ಶ ಕುಟುಂಬ.

**– ಲೀಲಾ, ಮೈಸೂರು**

**ಭ**ವ್ಯ ಸಮಾಜದ ನಿರ್ಮಾಣಕ್ಕೆ ಬೇಕಾದ ಆಶಾದಾಯಕ, ಪ್ರಗತಿಪೂರ್ಣ, ಸ್ವಾಸ್ಥ್ಯಚಿಂತನೆಯ ನಾಗರಿಕರನ್ನು ಸೃಷ್ಟಿಸುವಲ್ಲಿ ಆರಂಭದ ಘಟಕವಾದ ಕುಟುಂಬವು ಸಮಾಜದ ಔನ್ನತ್ಯಕ್ಕಾಗಿ ಅವಶ್ಯವಿರುವ ವ್ಯವಸ್ಥೆಗಳಲ್ಲಿ ಅತ್ಯಂತ ಮಹತ್ವದ ಪ್ರಾಮುಖ್ಯತೆಯನ್ನು ಪಡೆದಿದೆ. ಭಾರತೀಯ ಸಮಾಜಗಳಲ್ಲಿ ಕೌಟುಂಬಿಕ

ವ್ಯವಸ್ಥೆಯು ಉತ್ತಮ ರೀತಿಯಲ್ಲಿ ನಡೆದುಬರುತ್ತಿರುವುದು ನಮ್ಮ ಹೆಮ್ಮೆಯ ವಿಷಯ. ಭಾರತದ ಭವ್ಯಾತಿಭವ್ಯ ಧ್ರುವತಾರೆಗಳನ್ನು ನಿರ್ಮಿಸುವಲ್ಲಿ ಅಥವಾ ಉತ್ಕೃಷ್ಟ ವ್ಯಕ್ತಿತ್ವಗಳನ್ನು ಸೃಷ್ಟಿಸುವಲ್ಲಿ ಕೌಟುಂಬಿಕ ಹಿನ್ನೆಲೆಯು ಪ್ರಮುಖಪಾತ್ರ ವಹಿಸಿದೆ. ಕೌಟುಂಬಿಕ ಹಿನ್ನೆಲೆಯ ಪರಿಚಯವು ಆ ವ್ಯಕ್ತಿಗಳ ಅಧ್ಯಯನಗಳಲ್ಲಿ ಪರಿಗಣಿಸಲೇಬೇಕಾದ ಪ್ರಮುಖ ಅಂಶವಾಗಿದೆ. ಪ್ರಗತಿ ಪಥದ, ಉನ್ನತ ಹಾದಿಯ, ಸದಭಿರುಚಿಯ, ಸ್ವಾಸ್ಥ್ಯ ಚಿಂತನೆಯ, ಶಾಂತಿ ಪೂರ್ಣ ಸಂಗಮದ ಪರಿಪೂರ್ಣ ಸಮಾಜದ ಘಟಕವನ್ನು 'ಆದರ್ಶ ಕುಟುಂಬ' ವೆಂದು ವ್ಯಾಖ್ಯಾನಿಸಬಹುದು.

ಚೈತನ್ಯಪೂರ್ಣ, ಶಾಂತಿಪೂರ್ಣ, ಆರೋಗ್ಯವರ್ಧಕ ಚಿಂತನೆಗಳನ್ನು ನೀಡುವ ಅನುಭವಿಗಳು ಇಲ್ಲವೇ ಈ ವಿಚಾರದ ಬಗೆಗೆ ಜ್ಞಾನ ಪಡೆಯುವ ಹಂಬಲ ಹೊತ್ತು ಆ ದಿಕ್ಕಿನಲ್ಲಿ ಅಡಿಯಿಡುತ್ತಿರುವ ನಾಗರಿಕರು ಕುಟುಂಬದ ಜವಾಬ್ದಾರಿ ಹೊತ್ತಿದ್ದರೆ, ಆ ಕುಟುಂಬವು ಆದರ್ಶವಾಗುವುದರಲ್ಲಿ ಸಂಶಯ ವಿಲ್ಲ. ಮತ್ತೊಂದು ಪ್ರಮುಖ ಅಂಶವೆಂದರೆ ಆದರ್ಶಗಳಿಗೆ ಬದ್ಧವಾಗುವ ನಿರ್ಧಾರಕ್ಕೆ ಕುಟುಂಬದ ಸದಸ್ಯರೆಲ್ಲರ ಸಂಪೂರ್ಣ ಸಹಕಾರ. ಇದಲ್ಲದೆ ಆದರ್ಶ ಕುಟುಂಬದಲ್ಲಿ ಚಿಂತನೆ ಆರೋಗ್ಯಕರವಾಗಿದ್ದು, ಅದು ಯಾವ ಸದಸ್ಯರದ್ದೇ ಆಗಿದ್ದರೂ ಅದಕ್ಕೆ ಪ್ರತಿಸ್ಪಂದಿಸುವ ಮನೋಭಾವ, ಸಹಕಾರ, ನಡವಳಿಕೆ ಇರಬೇಕು. ಕುಟುಂಬದಲ್ಲಿ ಪ್ರತಿಯೊಬ್ಬ ಸದಸ್ಯನಿಗೂ ತಾಳ್ಮೆ, ಶಾಂತಿ, ಕ್ಷಮಾಗುಣ, ಇತರರನ್ನು ಪ್ರೀತಿಯಿಂದ ಕಾಣುವುದು, ಸ್ವಾರ್ಥಾಭಿಲಾಷೆಗಾಗಿ ಇತರರ ಮನನೋಯಿಸದೇ ಇರುವುದು, ಪ್ರತಿಯೊಬ್ಬರ ಆವಶ್ಯಕತೆಗಳನ್ನು ಮನಗಂಡು ಅಗತ್ಯಕ್ಕೆ ತಕ್ಕಂತೆ ಪೂರೈಸಲು ಪ್ರಯತ್ನಿಸುವುದು, ಅನಗತ್ಯ ವಾಗ್ವಾಳಿಗಳಿಗೆ ಅವಕಾಶ ನೀಡದೆ ಶಾಂತಿಯಿಂದಿರುತ್ತ ಕೌಟುಂಬಿಕ ಶಾಂತಿಯನ್ನು ಕಾಪಾಡುವುದು, ಧಾರ್ಮಿಕ ಕಾರ್ಯಗಳಲ್ಲಿ ಒಮ್ಮತದಿಂದ ಪಾಲ್ಗೊಳ್ಳುವುದು, ಪರಸ್ಪರ ಹೊಂದಾಣಿಕೆ, ಸಹನಾಭಾವನೆ, ಸಹಿಷ್ಣುತೆ, ಶಾಂತಿ–ಸಮಾಧಾನಗಳೇ ಆದರ್ಶ ಕುಟುಂಬದ ಮೂಲಮಂತ್ರಗಳು. **– ರಾಘವೇಂದ್ರ ರಾವ್, ಮೈಸೂರು**

**ಪಾ**ಶ್ಚಾತ್ಯರ ಅಂಧಾನುಕರಣೆ ಹಾಗೂ ಚಿತ್ರವಿಚಿತ್ರ ಕಾರ್ಯ ಕ್ರಮಗಳನ್ನು ಬಿತ್ತರಿಸುವ ಮಾಧ್ಯಮಗಳು ಇಂದಿನ ಭಾರತೀಯ ಕುಟುಂಬ ವ್ಯವಸ್ಥೆಯನ್ನು ಸಡಿಲಗೊಳಿಸುವಲ್ಲಿ ಪ್ರಧಾನ ಪಾತ್ರ ವಹಿಸಿವೆ. ದಿನವೂ ಗಂಡ–ಹೆಂಡತಿಯರ ನಡುವೆ ಜಗಳ, ಅದರ ಪರಿಣಾಮವಾಗಿ ವಿಚ್ಛೇದನ ಸಾಮಾನ್ಯವಾಗಿ ಬಿಟ್ಟಿದೆ. ಇದರ ನೇರ ದುಷ್ಪರಿಣಾಮವಾಗುವುದು ಅವರ ಮಕ್ಕಳ ಮೇಲೆ. ಕುಟುಂಬದಲ್ಲಿಲ್ಲದ ಸಂತೋಷವನ್ನು ಈ ಮಕ್ಕಳು ಹೊರಗಿನಿಂದ ಪಡೆಯಲು ಬಯಸುತ್ತಾರೆ. ಇಂದಿನ ಧಾವಂತದ ಯುಗದಲ್ಲಿ ವ್ಯಕ್ತಿಗಳ ಮನಸ್ಸು ಸಂಕೋಚಗೊಳ್ಳುತ್ತಿದೆ. ಕುಟುಂಬದ ಆಧಾರ ಸ್ತಂಭಗಳಾದ ಹಿರಿಯರನ್ನು ವೃದ್ಧಾಶ್ರಮಕ್ಕೂ, ಕುಟುಂಬದ ಅತಿ ಕಿರಿಯ ಮಕ್ಕಳನ್ನು ಶಿಶುಪಾಲನಾ ಕೇಂದ್ರಗಳಿಗೂ ಕಳುಹಿಸುವ ಪದ್ಧತಿ ಜಾಸ್ತಿಯಾದಂತೆ ತೋರುತ್ತಿದೆ.

ಹೀಗಿರುವಾಗ, ಇಂದಿನ ಕುಟುಂಬಗಳನ್ನು ಆದರ್ಶ ಕುಟುಂಬಗಳಾಗಿ ಹೇಗೆ ಮಾರ್ಪಡಿಸಬಹುದು? ಗಂಡ–ಹೆಂಡತಿಯರು ಪ್ರೀತಿ ಮತ್ತು ಅನ್ಯೋನ್ಯತೆಯಿಂದ ಇರುವುದು ಅತಿ ಮುಖ್ಯ. ಪ್ರತಿ ಕೆಲಸದಲ್ಲಿ ಸಮಭಾಗಿಗಳಾಗಿ ಕಾರ್ಯ ನಿರ್ವಹಿಸುವುದು, ಸಮಾನವಾಗಿ ಆಲೋಚಿಸುವುದು, ತ್ಯಾಗ ಮನೋಭಾವ ಹಾಗೂ ಸ್ವಾರ್ಥರಹಿತ ಜೀವನ ಪ್ರೀತಿ–ಅನ್ಯೋನ್ಯತೆಗಳನ್ನು ಹೆಚ್ಚಿಸಬಲ್ಲುದು. ಸತ್ಯನಿಷ್ಠೆಗೆ ಪ್ರಾಮುಖ್ಯತೆ ಕೊಡುವುದು, ದಾನ–ಧರ್ಮಗಳನ್ನು ಮಾಡುವುದು, ನ್ಯಾಯ ಯುತವಾಗಿ ಸಂಪಾದಿಸಿದ ಹಣದಲ್ಲಿ ತೃಪ್ತಿಪಡುವುದು ಆದರ್ಶ ಕುಟುಂಬದ ಕೆಲವು ಲಕ್ಷಣಗಳು.

ಆದರ್ಶ ಕುಟುಂಬದ ಸದಸ್ಯರು ಅಧ್ಯಯನಶೀಲರು, ಆಧ್ಯಾತ್ಮಿಕ ಪ್ರವಚನ, ಶ್ರವಣ, ಕಲೆ–ಸಂಗೀತಗಳಲ್ಲಿ ಆಸಕ್ತಿ ಹೊಂದಿರುವವರು ಹಾಗೂ ಪರೋಪಕಾರ ಮನೋಭಾವ ಉಳ್ಳವರಾಗಿರುತ್ತಾರೆ. ಅವರ ಮನೆಗಳಲ್ಲಿ ಧ್ಯಾನ–ಪ್ರಾಣಾ ಯಾಮ–ಯೋಗಾಸನ, ಭಜನೆ ದೈನಂದಿನ ಪರಿಪಾಠವಾಗಿರು ತ್ತದೆ. ಪರನಿಂದನೆ, ಇತರರಿಗೆ ಕೆಡುಕನ್ನು ಬಯಸುವುದು, ಹಣ–ಹೆಣ್ಣಿನ ಮೇಲಿನ ವ್ಯಾಮೋಹ, ಸ್ವಪ್ರಶಂಸೆ – ಇವುಗಳು ಆದರ್ಶ ಕುಟುಂಬದಿಂದ ಬಹು ದೂರ. ಕುಟುಂಬದ ಸದಸ್ಯರೆಲ್ಲರೂ ಸಾಧ್ಯವಾದ ಮಟ್ಟಿಗೆ ಒಟ್ಟಿಗೆ ಕುಳಿತು ಮನೆಯಲ್ಲಿಯೇ ತಯಾರಿ ಸಿದ ಹಿತಮಿತವಾದ ಭೋಜನ ಮಾಡುವುದು, ಸನ್ನಡತೆ–ಸದ್ವಿಚಾರಗಳನ್ನು ಕುರಿತು ಚರ್ಚಿಸುವುದು ಕುಟುಂಬದ ಸದಸ್ಯರ ಶಾರೀರಿಕ ಹಾಗೂ ಮಾನಸಿಕ ಆರೋಗ್ಯವನ್ನು ಸುಸ್ಥಿತಿಯಲ್ಲಿಡಲು ಸಹಕಾರಿಯಾಗುತ್ತದೆ. ಕುಟುಂಬದ ಸದಸ್ಯರೆಲ್ಲ ಸೇರಿ ವರ್ಷ ಕ್ಕೊಮ್ಮೆಯಾದರೂ ಪ್ರವಾಸ ಮಾಡುವುದು ಜ್ಞಾನವೃದ್ಧಿ ಹಾಗೂ ವ್ಯಕ್ತಿತ್ವ ವಿಕಸನಕ್ಕೆ ಸಹಾಯಕ.

ಈ ಶಿಸ್ತು ಹಾಗೂ ಸಂಯಮಗಳು ಜೀವನದ ಅವಿಭಾಜ್ಯ ಅಂಗವಾಗಿರುವ ಕುಟುಂಬದ ಮಕ್ಕಳು, ತಮ್ಮ ಮುಂದಿನ ಜೀವನವನ್ನು ಇದೇ ರೀತಿಯಾಗಿ ರೂಪಿಸುವುದರಲ್ಲಿ ಸಂಶಯವಿಲ್ಲ. ನೆರೆಹೊರೆಯವರು, ಸಂಬಂಧಿಕರು ಇವರನ್ನು ಅನುಸರಿಸುವರು. ಇದೊಂದು ಸರಪಣಿ ಕ್ರಿಯೆಯಾಗಿ (chain reaction) ಮಾರ್ಪಟ್ಟಲ್ಲಿ, ಭವಿಷ್ಯದ ಕುಟುಂಬಗಳು ಹೆಚ್ಚು ಆದರ್ಶಮಯವಾಗಲು ಸಾಧ್ಯ ಹಾಗೂ ಸಮಾಜದ ಸರ್ವಾಂಗೀಣ ಅಭಿವೃದ್ಧಿಯ ಕನಸು ನನಸಾಗುವುದು ನಿಶ್ಚಿತ.

**– ಡಾ. ಕೆ. ಬಾಲಕೃಷ್ಣ ದಿವಾಣ, ಮಣಿಪಾಲ**

**ವಿವೇಕಪ್ರಭದ ಬಗ್ಗೆ ಓದುಗರಾದ ನಿಮ್ಮ ಪ್ರತಿಕ್ರಿಯೆಗಳನ್ನು ಹಾರ್ದಿಕವಾಗಿ ಸ್ವಾಗತಿಸುತ್ತೇವೆ. ಬರಿಯ ಹೊಗಳಿಕೆ ಇರದೆ, ರಚನಾತ್ಮಕ ವಿಮರ್ಶೆ–ಟೀಕೆಗಳಿರುವ ಪತ್ರಗಳನ್ನು ಪತ್ರಿಕೆಯಲ್ಲಿ ಕಾಲಕಾಲಕ್ಕೆ ಪ್ರಕಟಿಸಲಾಗುವುದು. ಇಂಥ ಪತ್ರಗಳು ವಿಚಾರಮಂಥನಕ್ಕೆ ಮತ್ತು ಪತ್ರಿಕೆಯನ್ನು ಉತ್ತಮಪಡಿಸುವುದಕ್ಕೆ ಅವಕಾಶ ನೀಡುವಂತಿರಲಿ. –ಸಂ.**